


## ಮಾಲ್‌ಗಳ ವಿವರ ಮಾಹಿತಿ

'ಸುಧಾ' ಆ.15ರ 'ಮಾಲ್ ಕಲ್ಚರ್' ಮುಖಪುಟ ಲೇಖನಗಳಲ್ಲಿ ಉಮಾ ಅನಂತ್, ನೇಸರ ಕಾಡನಕುಪ್ಪೆ, ಸುಭಾಸ ಮಂಗಳೂರ, ರಾಜೇಶ್ ಚಟ್ಟ ಅವರು ಶಾಪಿಂಗ್ ಕಾಂಪ್ಲೆಕ್ಸ್‌ಗಳ ಕುರಿತು ಅನೇಕ ಮಾಹಿತಿಗಳನ್ನು ನೀಡಿದ್ದಾರೆ. ಒಂದೇ ಸೂರಿನಡಿ ಅಗತ್ಯ ವಸ್ತು ಹಾಗೂ ಮನರಂಜನೆ ಸಿಗುವ 'ಮಾಲ್'ಗಳು ಯಾರನ್ನೇ ಆಗಲಿ ಆಕರ್ಷಿಸುತ್ತವೆ. ಆದರೆ ಮಾಲ್‌ಗಳ ಬಹುತೇಕ ಅಂಗಡಿಗಳಲ್ಲಿ ವ್ಯಾಪಾರ ಇರುವುದಿಲ್ಲ!

-ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಶ್ಯಾಮಸುಂದರ್, ಬೆಂಗಳೂರು/ ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ/ ವಿಭಾ ಮುರಳೀಧರ್, ತುಮಕೂರು

## ಅಪೂರ್ಣ ಮಾಹಿತಿ

ಚಂದ್ರಹಾಸ ಚಾರ್ಮಾಡಿ ಅವರ 'ಟೊಮೆಟೊ ಅಲ್ಲ, ಪೆಪಿನೊ!' ಬರಹದಲ್ಲಿ ಮಾಹಿತಿ ಅಪೂರ್ಣವಾಗಿದೆ. ಬೀಜ ಹಾಕಿ ಬೆಳೆಯಬಹುದೆ? ಅಥವಾ ಗಿಡಗಳ ರೆಂಬೆ ನೆಟ್ಟು ಬೆಳೆಯಬಹುದೆ? ಬೀಜದ ಅವಶ್ಯಕತೆ ಇದ್ದರೆ ಅವು ದೊರೆಯುವುದೆಲ್ಲಿ ಎಂದು ತಿಳಿಸಿದ್ದರೆ ಅನುಕೂಲವಾಗುತ್ತಿತ್ತು.

-ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

## ಸಮಯೋಚಿತ ವಿಚಾರ

'ಆಧುನಿಕ "ಮಯ" ಸದನಗಳು' ಲಹರಿಯಲ್ಲಿ ಬಡವ- ಬಲ್ಲಿದರ ವಿಚಾರವನ್ನು ಶಿಕಾಕು ಸಮಯೋಚಿತವಾಗಿ ಪ್ರಸ್ತಾಪಿಸಿದ್ದಾರೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

## ಮುತ್ತಿನಂತಹ ಮಾತು

'ಕೇವಲ ಆಡಳಿತ ನಡೆಸುವವರ ಬಳಿಯೇ ಕಾನೂನು ಇದ್ದರೆ, ಆ ಕಾನೂನು ಶೀಘ್ರ ಹಾಳಾಗುತ್ತದೆ' ಎಂಬ ಹರ್ಬರ್ಟ್ ಹೂವರ್ ಅವರ 'ಮಾತೇ ಮುತ್ತು' ನಮ್ಮ ದೇಶದ ಮಟ್ಟಿಗೆ ಸತ್ಯವೇ ಆಗಿದೆ.

-ಶ್ರೀನಾಥ್ ಕೊನೇಟಿ, ಬೆಂಗಳೂರು

## 'ನೀವು ಕೇಳಿದಿರಿ?' ಉತ್ತಮ ಅಂಕಣ

'ನೀವು ಕೇಳಿದಿರಿ? ಅಂಕಣದಲ್ಲಿ ಓದುಗರ ಪ್ರಶ್ನೆಗಳು ಹಾಗೂ ರಾಮ್ ಉತ್ತರ ಉತ್ತಮವಾಗಿ ಮೂಡಿಬರುತ್ತಿವೆ.

-ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

## ಸೊಗಸಾದ ಚಿತ್ರ-ಬರಹ

ಬಿ.ವಿ.ಪ್ರಕಾಶ್‌ರ 'ಸಿಂಹಾವಲೋಕನ' ಚಿತ್ರ-ಬರಹ ಸೊಗಸಾಗಿ ಮೂಡಿ ಬಂದಿದೆ.

-ಕೆ.ಆರ್.ವೀಣಾ, ಧರ್ಮಸ್ಥಳ

## ಎಲ್ಲರೂ ಓದಬೇಕು!

'ಸುಖೀಭವ' ಅಂಕಣದಲ್ಲಿ ಮಕ್ಕಳಿಗೆ ಲೈಂಗಿಕ ಶಿಕ್ಷಣ ಏಕೆ ಬೇಕು? ಎಂಬುದರ ಕುರಿತು ಡಾ.ವಿನೋದ್ ಛಬ್ಬಿಯವರು ಬರೆದಿರುವುದನ್ನು ಪೋಷಕರು, ಶಿಕ್ಷಕರು ಓದಲೇಬೇಕು.

-ರೇಷ್ಮಾ ಎ.ಎಸ್., ಬಾಳೆಹೊನ್ನೂರು/ ಪಿ.ಎನ್. ಶ್ರೀವತ್ಸ, ಬೆಂಗಳೂರು

## ಮಾನವಾಸಕ್ತ ವಂಡರ್

'ವಂಡರ್ ಪುಟ'ದಲ್ಲಿ ವಿದ್ಯಾ ವಿ.ಹಾಲಭಾವಿ ಸಂಗ್ರಹಿಸಿದ 'ವಿಚಿತ್ರ ಸಾಹಸಿ' ಎಂಬ ಮಾನವಾಸಕ್ತ ಚಿತ್ರಬರಹ ಅಮೂಲ್ಯವಾಗಿತ್ತು.

-ಜೆನ್ಸನ್ ತೋಮಸ್, ನೆಲ್ಯಾಡಿ/ ಓಂ ಚನ್ನೇಶ್ ಅರಬಿಳಚಿ ಕ್ಯಾಂಪ್, ಭದ್ರಾವತಿ/ ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ

## ಸಕಾಲಿಕ ಕಥೆ

ಆ.8ರ 'ಸುಧಾ' ಸಂಚಿಕೆಯ ಹಿರಿಯ ಕಥೆಗಾರ್ತಿ ಪ್ರೇಮಾಭಟ್‌ರ 'ನಾಮಾವಶೇಷ'ದಲ್ಲಿ ಮಗನ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಹೊರಟ ಕಥಾ ನಾಯಕಿ ಲೀಲಾ, ಭದ್ರ ಬುನಾದಿಯೇ ಇಲ್ಲದೆ ಆಕಾಶದೆತ್ತರಕ್ಕೆ ಬೆಳೆದ ಮಹಡಿಗಳಲ್ಲಿ ಮಣ್ಣಾದ ದುರಂತ ಚಿತ್ರಿಸಲಾಗಿದೆ. ಮುಂಬಯಿ, ಬೆಂಗಳೂರುಗಳ ಬಹುಮಹಡಿ ಕಟ್ಟಡಗಳ ಅನಾಹುತದ ಹಿನ್ನೆಲೆಯಲ್ಲಿ ಕಥಾವಸ್ತು ಸಕಾಲಿಕವಾಗಿದೆ.

-ಕೊಹಿಮ, ಬಸರಕೋಡು/ ಪಿ.ಎನ್.ಶ್ರೀವತ್ಸ, ಬೆಂಗಳೂರು

## ಮಲ್ಪಾ ದುರಂತದ ತಪ್ಪು ಮಾಹಿತಿ

'ಸುಧಾ' ಜುಲೈ18ರ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಮಲ್ಪಾ ದುರಂತಕ್ಕೆ 15 ವರ್ಷ' ಎಂಬ ಸಂತೋಷ ಕುಮಾರ ಮೆಹೆಂದಳೆ ಲೇಖನಕ್ಕೆ ನನ್ನ ಪ್ರತಿಕ್ರಿಯೆ:

ನನ್ನ ತಾಯಿ ಎಲ್. ಪದ್ಮಾವತಮ್ಮ 12ನೇ ಬ್ಯಾಚಿನಲ್ಲಿದ್ದ 62 ಜನ ಯಾತ್ರಾರ್ಥಿಗಳಲ್ಲಿ ಒಬ್ಬರು. 'ಆ ದುರಂತದಲ್ಲಿ ಅಷ್ಟೂ ಜನ ಯಾತ್ರಾರ್ಥಿಗಳು ಸಮಾಧಿಯಾದರು. ಯಾವುದೇ ದೇಹವನ್ನು ಅಥವಾ ವಸ್ತುವನ್ನು ಅಲ್ಲಿಂದ ತೆಗೆಯಲಾಗಲಿಲ್ಲ' ಎಂದು ಲೇಖಕರು ಬರೆದಿದ್ದಾರೆ. ಅವರ ಈ ಎರಡನೇ ಮಾಹಿತಿ ಮತ್ತು ಅಭಿಪ್ರಾಯ ಸಂಪೂರ್ಣವಾಗಿ ತಪ್ಪು.

ಎಲ್ಲರೂ ಸಮಾಧಿಯಾದರು, ನಿಜ. ಆದರೆ, ಭಾರತೀಯ ಸೇನೆ ಹಲವರ ಶವಗಳನ್ನು ಅಗೆದು ತಂದು ಕುಟುಂಬಗಳಿಗೆ ಒಪ್ಪಿಸಿತು. ಇದಕ್ಕೆ ಪುರಾವೆ ಇದೆ.

ನಾನು ಮತ್ತು ಯಾತ್ರಾರ್ಥಿಗಳ ಇನ್ನೂ ಅನೇಕ ಮಂದಿ ಕುಟುಂಬದ ಸದಸ್ಯರು ಭಾರತೀಯ ಸೈನಿಕರೊಡನೆ ಧಾರ್ಚುಲಕ್ಕೆ ಹೋಗಿ ಪ್ರತಿ ದಿನವೂ (ನಾಲ್ಕು ದಿನಗಳ ಕಾಲ) ಸೇನೆಯವರು ತರುತ್ತಿದ್ದ ಯಾತ್ರಾರ್ಥಿಗಳ ಹಾಗೂ ಪೋರ್ಟರ್‌ಗಳ ಶವಗಳನ್ನು ನೋಡಿ ಎಣಿಸುತ್ತಿದ್ದೆವು. ಸೈನಿಕರು ನಮ್ಮಲ್ಲಿ ಕೆಲವರನ್ನು ಹೆಲಿಕಾಪ್ಟರ್ ಮೂಲಕ ದುರಂತ ಸ್ಥಳಕ್ಕೆ ಒಯ್ಯಲು ಸಹಾಯ ಮಾಡಿದ್ದಾರೆ. ನಮ್ಮಗಳ ತಾಯಿ, ತಂದೆ, ಸೋದರಿ, ಸೋದರ ಇತರ ಬಂಧುಗಳ ಮುಖ ದರ್ಶನಕ್ಕಾಗಿ ನಾವು ದುಃಖತಪ್ತರಾಗಿ ಕಾಯುತ್ತಿದ್ದೆವು. ಹಾಗೆ ಕಾಯುತ್ತಿದ್ದ ನಾನು, ಮಣ್ಣಿನಡಿಯಿಂದ ಹೊರತೆಗೆದ ಒಟ್ಟು 40 ಯಾತ್ರಾರ್ಥಿಗಳ ದೇಹಗಳನ್ನು ಎಣಿಸಿದ್ದೇನೆ.

ಹಾಗೆ ಹೊರಬಂದ ಶವಗಳ ಕುಟುಂಬದ ಸದಸ್ಯರು ತಮ್ಮ ಬಂಧುಗಳ ಗುರುತು ಹಿಡಿದು, ಧಾರ್ಚುಲದಲ್ಲೇ ಅಂತ್ಯಕ್ರಿಯೆ ನಡೆಸಿದ್ದನ್ನೂ ನೋಡಿದ್ದೇನೆ ಮತ್ತು ಮೂರನೇ ದಿನ ನನ್ನ ತಾಯಿಯ ದೇಹ ಸಿಕ್ಕ ಮೇಲೆ ಆಕೆಯ ಅಂತ್ಯಕ್ರಿಯೆಯನ್ನೂ ನಾನೇ ಮಾಡಿದ್ದೇನೆ.

-ವಿನತೆ ಶರ್ಮಾ, ಬೆಂಗಳೂರು

